ಅಧ್ಯಕ್ಷರು :—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ವೈ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ವಿಷಯ :—ಗುಲ್ಬರ್ಗಾ ಬಡೇಪುರ ಕಾಲೋನಿಯಲ್ಲಿ ಕಟ್ಟಡದ ಮನೆಗಳು.

ಪ್ರಶ್ನೆ 75 (91) ಡಾ. ವಿ.ಎಸ್. ಆಚಾರ್ಯ (ಉಡುಪಿ).—ಮಾನ್ಯ ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಗುಲ್ಬರ್ಗಾ ಬಡೇಪುರ ಕಾಲೋನಿ ಕರ್ನಾಟಕ ಹೌಸಿಂಗ್ ಬೋರ್ಡಿನವರು ಕಟ್ಟುತ್ತಿರುವ ಮನೆಗಳು ತುಂಬಾ ಕಳಪೆ ಮಟ್ಟದ್ದಾಗಿದ್ದು ಒಂದು ಮಳೆಗಾಲ ಕಳೆಯುವುದರೊಳಗಾಗಿಯೇ ಗೋಡೆಗಳಲ್ಲಿ ಬಿರುಕು ಬಿಟ್ಟಿರುವುದು ಹಾಗೂ ಗೋಡೆಗಳು ಬಿದ್ದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹೌಸಿಂಗ್‌ಬೋರ್ಡ್ ಇಂಜನಿಯರುಗಳು ಹಾಗೂ ಕಂಟ್ರಾಕ್ಟರುಗಳು ಶಾಮೀಲಾಗಿದ್ದಾರೆಂಬ ದೂರು ಸರಕಾರಕ್ಕೆ ಬಂದಿದೆಯೆ ;

ಇ. ಹಾಗಿದ್ದರೆ ಈ ವಿಚಾರದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ವಸತಿ ಮಂತ್ರಿಗಳು) :—

ಅ. 1979ರಲ್ಲಿ ಪೂರ್ಣಗೊಂಡ 266 ಮನೆಗಳ ಪೈಕಿ, ಆರ್ಥಿಕವಾಗಿ ಹಿಂದುಳಿದ ವರ್ಗದವರ 3 ಮನೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ ಮತ್ತು ಶೌಚಗೃಹಗಳ ಕಡೆಗೆ ಇರುವ ಗೋಡೆಗಳು ಬಿದ್ದಿವೆ.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ವಿಷಯ :—ಉಡುಪಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣ ಕಟ್ಟುವುದು.

ಪ್ರ. 79 (93) ಡಾ. ವಿ.ಎಸ್. ಆಚಾರ್ಯ (ಉಡುಪಿ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಉಡುಪಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ರಚಿಸುವ ಸಲಹೆ ವಿಚಾರ ಸರ್ಕಾರದವರಲ್ಲಿ ಇದೆಯೇ ;

ಆ. ಹಾಗಿದ್ದಲ್ಲಿ ಈ ಬಗ್ಗೆ ಆಗಿರುವ ಪ್ರಗತಿ ಏನು ;

ಇ. ಈ ಕಾರ್ಯ ತಡವಾಗಿ ಸಾಗುತ್ತಿರಲು ಕಾರಣಗಳೇನು ?

ಶ್ರೀ ಎಂ.ಪಿ. ಪ್ರಕಾಶ್ ರಾಜ್ಯ ಸಾರಿಗೆ ಮಂತ್ರಿಗಳು:—

ಅ. ಹೌದು

ಆ. ಬಸ್ ನಿಲ್ದಾಣಕ್ಕೆ ಬೇಕಾದ ನಿವೇಶನವನ್ನು 14-6-1983 ರಂದು ಸಂಸ್ಥೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ ;

ಇ. ಸೂಕ್ತ ನಿವೇಶನವನ್ನು ಹುಡುಕಿ ಸ್ಥಳ ನಿರ್ಧಾರ ಮಾಡುವುದು ತಡವಾಯಿತು.

ವಿಷಯ :—ರಾಜ್ಯದಲ್ಲಿ ಜನತಾ ಮನೆಗಳ ಮಂಜೂರಾತಿ,

ಪ್ರ. 77 (97) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ). —ಮಾನ್ಯ ಕಾನೂನು ಸಂಸದೀಯ ವ್ಯವಹಾರ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜ್ಯದಲ್ಲಿ 1980-81 ರಿಂದ 1983-84ವರೆಗೆ ಪ್ರತಿವರ್ಷ ಮಂಜೂರಾದ ಜನತಾ ಮನೆಗಳ ಸಂಖ್ಯೆ ಎಷ್ಟು ;

ಆ. ಪ್ರತಿವರ್ಷ ಬಿಡುಗಡೆ ಮಾಡಬೇಕಾದ ಹಣ ಎಷ್ಟು ;

ಇ. ಪೂರ್ಣಗೊಂಡ ಜನತಾ ಮನೆಗಳ ಸಂಖ್ಯೆ ಎಷ್ಟು ? ಇನ್ನುಳಿದ ಜನತಾ ಮನೆಗಳನ್ನು ಈ ವರ್ಷದಲ್ಲಿಯೇ ಪೂರ್ತಿಗೊಳಿಸುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ ಕಾನೂನು ಮತ್ತು ಸಂಸದೀಯ ಮತ್ತು ವಸತಿ ಮಂತ್ರಿಗಳು:—

ಅ. ಮಂಜೂರಾದ ಮನೆಗಳು

1980-81	—	50,000 ಮನೆಗಳು
1981-82	—	1,00,000 ಮನೆಗಳು.
1982-83	—	1,02,000 ಮನೆಗಳು ಮಂಜೂರಾಗಿದ್ದು ಹಣ ಬಿಡುಗಡೆ ಮಾಡಲಿಲ್ಲ.

	1983–84	—	82–83ರ ಸಾಲಿನಲ್ಲಿ ಮಂಜೂರಾದ 1,02,000 ಮನೆಗಳ ಪೈಕಿ 58,000 ಮನೆಗಳ ನಿರ್ಮಾಣವನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಂಡಿದೆ.
ಆ.	1980–81	—	ರೂ. 355 ಲಕ್ಷ ಸಾಲ
		—	ರೂ. 750 ಲಕ್ಷ ಅನುದಾನ.
	1981–82	—	ರೂ. 1865 ಲಕ್ಷ ಅನುದಾನ
		—	ರೂ. 950 ಲಕ್ಷ ಸಾಲ
		—	ರೂ. 2040 ಲಕ್ಷ ಅನುದಾನ
		—	ರೂ. 1125 ಲಕ್ಷ ಸಾಲ
	1982–83	—	ಹಣ ಬಿಡಗಡೆ ಮಾಡಿಲ್ಲ.
	1983–84	—	ರೂ. 1160 ಲಕ್ಷ ರೂ. ಅನುದಾನ
		—	ರೂ. 675 ಲಕ್ಷ ರೂ. ಸಾಲ

ಇ. ಜನತಾ ವಸತಿ ಯೋಜನೆ ಪ್ರಾರಂಭವಾದಾಗಿನಿಂದ (1973–74) 83 ಜೂನ್ ತಿಂಗಳ ಕೊನೆಯವರೆಗೆ 3,61,872 ಮನೆಗಳು ಕಟ್ಟಲಾಗಿವೆ. ಉಳಿದ ಮನೆಗಳು ಪೂರ್ಣಗೊಳಿಸುವುದು ಹಣ ಒದಗಿಸುವುದರ ಮೇಲೆ ಆಧಾರಪಟ್ಟಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು :—

1. ಶ್ರೀ ಎಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿ) :— ಅಧ್ಯಕ್ಷರೇ, 1981–82ನೇ ಸಾಲಿನ ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕೆಳಕಂಡ ವಾರ್ಷಿಕ ಆಡಳಿತಾತ್ಮಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ. ತುಂಗಭದ್ರಾ ಯೋಜನೆ, ಮುನಿರಾಬಾದ್
ಆ. ಭದ್ರಾ ಯೋಜನೆ, ಶಿವಮೊಗ್ಗ
ಇ. ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗಳು, ಬೆಳಗಾಂವ್
ಈ. ಕೃಷ್ಣ ಮೇಲ್ದಂಡೆ ಯೋಜನೆ, ಭೀಮರಾಯನ ಗುಡಿ
ಉ. ಕಾವೇರಿ ಜಲಾನಯನ ಯೋಜನೆಗಳು, ಮೈಸೂರು

2. ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿ) :—ಅಧ್ಯಕ್ಷರೇ, 1964ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ 194(2)ನೇ ಕಲಮಿನ ಮೇರಿಗೆ ಹೊರಡಿಸಲಾದ,

ಅ. 1981–82ನೇ ಸಾಲಿನ ಶಿಕಾರಿಪುರ ತಾಲ್ಲೂಕಿನ 10 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 27 ಟಿಆರ್‌ಎಮ್ 82 ದಿನಾಂಕ 11ನೇ ಆಗಸ್ಟ್ 1983.
ಆ. 1982–1983ನೇ ಸಾಲಿನ ಚನ್ನರಾಯಪಟ್ಟಣ ತಾಲ್ಲೂಕಿನ 383 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 56 ಟಿಆರ್‌ಎಮ್ 83 ದಿನಾಂಕ 11ನೇ ಆಗಸ್ಟ್ 1983.
ಇ. 1980–1981ನೇ ಸಾಲಿನ ಮಳವಳ್ಳಿ ತಾಲ್ಲೂಕಿನ 68 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 42 ಟಿಆರ್‌ಎಮ್ 83 ದಿನಾಂಕ 12ನೇ ಆಗಸ್ಟ್ 1983.
ಈ. 1982–1983ನೇ ಸಾಲಿನ ಹೊಸಕೋಟೆ ತಾಲ್ಲೂಕಿನ 344 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 14 ಟಿಆರ್‌ಎಮ್ 83 ದಿನಾಂಕ 12ನೇ ಆಗಸ್ಟ್ 1983.
ಉ. 1980–1981ನೇ ಸಾಲಿನ ಕೆ.ಆರ್. ಪೇಟ್ ತಾಲ್ಲೂಕಿನ 47 ಗ್ರಾಮಗಳ ಭೂಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 45 ಟಿಆರ್‌ಎಮ್ 83 ದಿನಾಂಕ 12ನೇ ಆಗಸ್ಟ್ 1983
ಊ. 1980–1981ನೇ ಸಾಲಿನ ಹಾಸನ ತಾಲ್ಲೂಕಿನ 238 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 2 ಟಿಆರ್‌ಎಮ್ 83 ದಿನಾಂಕ 17ನೆ ಆಗಸ್ಟ್ 1983.
ಋ. 1980–81ನೇ ಸಾಲಿನ ಶ್ರೀರಂಗಪಟ್ಟಣ ತಾಲ್ಲೂಕಿನ 21 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಆರ್‌ಡಿ 38 ಟಿಆರ್‌ಎಮ್ 83 ದಿನಾಂಕ 17ನೇ ಆಗಸ್ಟ್ 1983.